# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 223/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-03-2026 ರಂದು ಪ್ರಮಾಣ ಮಾಡಿಸಲಾಯಿತು**

| | | |
|---|---|---|
| **ಸಾಕ್ಷಿಯ ಹೆಸರು** | : ಈಶ್ವರ ಮೂಲಿಮನಿ | **ಪ್ರಾ.ಸಾ : 08** |
| **ತಂದೆ : ಗಂಡ ಹೆಸರು** | : ಪರಶುರಾಮ | **ಚಾ.ಸಾ : 11** |
| **ವಯಸ್ಸು** | : 23 ವರ್ಷ | |
| **ಉದ್ಯೋಗ** | : ಕೂಲಿ | |
| **ವಾಸಸ್ಥಳ** | : ತುಮರಿಕೊಪ್ಪ | |

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ:**

ಚಾಸಾ-1 ನನ್ನ ತಾಯಿ, ಚಾಸಾ-4 ರಿಂದ 10, 12 ರಿಂದ 15 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

3 ವರ್ಷಗಳ ಹಿಂದೆ ಹೋಳಿ ಹಬ್ಬದ ದಿನದಂದು ಆರೋಪಿತರು ಚಾಸಾ-4 ರವರ ಜೊತೆಗೆ ಜಗಳ ಮಾಡುತ್ತಿದ್ದರು. ಚಾಸಾ-12 ಮತ್ತು 15 ರವರು ಜಗಳ ಬಿಡಿಸಲು ಹೋಗಿರುತ್ತಾರೆ. ಜಗಳ ಬಿಡಿಸಿ ಕಳುಹಿಸಿದ್ದು ಆರೋಪಿತರು ಪುನಃ ದಾಂದಲೆ ಮಾಡುತ್ತಾ ಬಂದಿರುತ್ತಾರೆ. ದಾಂದಲೆ ಮಾಡುವಾಗ ನಾನು, ಚಾಸಾ-1, 5, 6, 7, 10 ಮತ್ತು 12 ರವರು ಹೋಗಿದ್ದು ಕಲ್ಲು ಮತ್ತು ಕಟ್ಟಿಗೆಗಳಿಂದ ನಮ್ಮನ್ನು ಹೊಡೆಯಲು ಬಂದಿರುತ್ತಾರೆ. ಜಗಳದಲ್ಲಿ ಚಾಸಾ-5 ರವರ ತಲೆಗೆ ಗಾಯವಾಗಿರುತ್ತದೆ, ಚಾಸಾ-5 ರವರಿಗೆ ಪ್ರಜ್ಞೆ ತಪ್ಪಿದ್ದರಿಂದ ನಾನು ಕಲಘಟಗಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-1 ರವರಿಗೂ ಸಹ ಒಳಪೆಟ್ಟು ಆಗಿರುತ್ತದೆ. ಈ ಬಗ್ಗ ಚಾಸಾ-1 ರವರು ಪೋಲೀಸರ ಮುಂದೆ ದೂರು ನೀಡಿರುತ್ತಾರೆ. ಘಟನೆ ಬಗ್ಗ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನಮ್ಮ ಮೇಲೆ ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲು-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ:**

ದಿನಾಂಕ 07.03.2023 ರಂದು ಸಾಯಂಕಾಲ 6-30 ಕ್ಕೆ ನಮ್ಮ ಊರಿನ ಚರ್ಚ ಎದುರಿನ ರಸ್ತೆ ಮೇಲೆ ಜಗಳ ಆಗುತ್ತಿದ್ದು ನಾವು ಜಗಳ ಬಿಡಿಸಲು ಹೋದಾಗ ಆರೋಪಿತರು ಜಗಳ ಬಿಡಿಸಲು ನೀವು ಯಾರು ಇದರಲ್ಲಿ ಬರಬೇಡಿ ಎಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿರುತ್ತಾರೆ ಅಂದರೆ ನಿಜ. ಚಾಸಾ-8 ರವರು ತಂಟೆ ಮಾಡಬೇಡರಿ, ಎಲ್ಲರೂ ಸೇರಿಕೊಂಡು ಬಗೆಹರಿಸೋಣ ಎಂದು ಬುದ್ದಿವಾದ ಹೇಳಿದರೂ ಕೂಡಾ ಆರೋಪಿತರು ಕೇಳಲಿಲ್ಲ ಅಂದರೆ ನಿಜ. ಆರೋಪಿತರು ತಮ್ಮ ಕೈಗಳಲ್ಲಿ ಬಡಿಗೆ ಹಾಗೂ ಕಲ್ಲುಗಳನ್ನು ಹಿಡಿದುಕೊಂಡಿದ್ದು 1ನೇ ಆರೋಪಿ ಚಾಸಾ-8 ರವರಿಗೆ ನಿನಗೆ ಸೊಕ್ಕು ಬಹಳ ಇದೆ ಸೂಳೆಮಗನೆ ಎಂದು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ ಅಂದರೆ ನಿಜ.

2 ನೇ ಆರೋಪಿ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಲ್ಲಿನಿಂದ ಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಚಾಸಾ-6 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಗಳಿಂದ ಹೊಡಿ ಬಡಿ ಮಾಡಿರುತ್ತಾರೆ ಅಂದರೆ ನಿಜ.

2 ನೇ ಆರೋಪಿ ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಮಾನಭಂಗ ಮಾಡಿರುತ್ತಾನೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ನಿಜ. ನನಗೆ 5 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಯಿಂದ, ಬಡಿಗೆಯಿಂದ ಚಾಸಾ-6 ರವರ ಮೈಕೈಗಳಿಗೆ ಹಲ್ಲೆ ಮಾಡಿರುತ್ತಾರೆ ಅಂದರೆ ನಿಜ. 4 ನೇ ಆರೋಪಿ ಬಡಿಗೆಯಿಂದ ಚಾಸಾ-10 ರವರ ಮೈ ಕೈಗೆ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 7 ನೇ ಆರೋಪಿಯು ಚಾಸಾ-12 ರವರಿಗೆ ತನ್ನ ಕೈಯಲ್ಲಿದ್ದ ಬಡಿಗೆ ಹಾಗೂ ಕೈಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 8 ಮತ್ತು 9 ನೇ ಆರೋಪಿತರು ಚಾಸಾ-13 ರವರ ಮೈಮೇಲೆ ತಮ್ಮ ಕೈಗಳಲ್ಲಿ ಇದ್ದ ಬಡಿಗೆ ಹಾಗೂ ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಅಂದರೆ ನಿಜ. 5 ಮತ್ತು 6 ನೇ ಆರೋಪಿತರು ತಮ್ಮ ಕೈಯಲ್ಲಿ ಇದ್ದ ಬಡಿಗೆಯಿಂದ ಚಾಸಾ-12 ರವರಿಗೆ ಕೈಗಳಿಂದ ಮತ್ತು ಬಡಿಗೆಗಳಿಂದ ಹೊಡೆದು ಗಾಯ ಪಡಿಸಿರುತ್ತಾರೆ ಅಂದರೆ ನಿಜ. 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಮೈಮೇಲೆ ಹಲ್ಲೆ ಮಾಡಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಿರುತ್ತಾರೆ ಅಂದರೆ ನಿಜ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಅಂದರೆ ನಿಜ. ಚಾಸಾ-14 ಮತ್ತು 15 ರವರು ಜಗಳ ಬಿಡಿಸಿಕೊಂಡಿರುತ್ತಾರೆ ಅಂದರೆ ನಿಜ. ಆರೋಪಿತರು ಹೋಗುವಾಗ ಈಗ ಉಳಿದುಕೊಂಡಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ನಿಜ. ಜಗಳ ಆದ ನಂತರ ನಾವು ಕಲಘಟಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇವೆ ಅಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**